ದಿನಾಂಕಃ 06.12.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.

ಪಾಟೀಸವಾಲುಃ ಶ್ರೀ. ಪಿ ಎಸ್ ವಕೀಲರಿಂದ ಆರೋಪಿ ಪರವಾಗಿ.

ಆರೋಪಿಯು ಆಲ್ಫಾ ಡೆವಲಪರ್ ಪರ್ಮ್ ಇದರಲ್ಲಿ ಪಾಲುದಾರರು ಆಗಿದ್ದರು ಎನ್ನುವ ಕುರಿತಂತೆ ಏನಾದರೂ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಹಾಜರುಪಡಿಸಿರುವುದಿಲ್ಲ. ಆರೋಪಿಯು ಆಲ್ಫಾ ಡೆವಲಪರ್ ಪರ್ಮ್ ನಲ್ಲಿ ಪಾಲುದಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಸೈಟ್ ಗಳನ್ನು ಮಾಡಿ ಅವುಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದಾಗಿ ನಮ್ಮನ್ನು ಪುಸಲಾಯಿಸಿರುತ್ತಾರೆ ಎನ್ನುವ ಕುರಿತಂತೆ ಏನಾದರೂ ಬ್ರೋಚರ್ ಅಥವಾ ಕರಪತ್ರಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಸ್ವತಃ ತಮ್ಮ ಹತ್ತಿರ ಇರುತ್ತದೆ ಎಂದು ನುಡಿದಿರುತ್ತಾರೆ. ಆರೋಪಿಗೆ ಕಂತಿನ ಮೂಲಕ ಹಣವನ್ನು ಪಾವತಿ ಮಾಡಿರುತ್ತೇವೆ ಎನ್ನುವ ಕುರಿತಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ಆ ರೀತಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾು ಹಾಜರುಪಡಿಸಿರುವಂತಹ ನಿಪಿಃ7 ರಂತಿರುವ ಎಮ್ ಒ ಯು ದಾಖಲೆಯಲ್ಲಿ ಆರೋಪಿಯು ಆ ಪತ್ರವನ್ನು ಮಾಡಿಕೊಂಡಿರುತ್ತಾರೆ ಎನ್ನುವ ಕುರಿತಂತೆ ಅವರ ಸಹಿ ಅಥವಾ ಹೆಸರು ಇರುತ್ತದೆಯಾ ಎಂದರೆ ಅವರ ಸಹಿ ಇರುತ್ತದೆ. ನಿಪಿಃ7 ರಂತಿರುವ ಪತ್ರವು ನಮ್ಮ ಮತ್ತು ಆರೋಪಿಯ ಮದ್ಯೆ ಆಗಿರುವಂತಹದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿರುವಂತಹ ನಿಪಿಃ8 ರಂತಿರುವ ಕ್ರಯದ ಕರಾರುಪತ್ರದಲ್ಲಿ ಆರೋಪಿಯ ಸಹಿ ಇರುತ್ತದೆಯಾ ಎಂದರೆ ಇರುವುದಿಲ್ಲ. ಸಾಕ್ಷಿ ಸ್ವತಃ ಆರೋಪಿಯ ಪಾಲುದಾರರರಾದ ಇನ್ನೊಬ್ಬರು ಸಹಿ ಮಾಡಿದ್ದು ಆದರೆ ಆರೋಪಿಗೆ ಸಹಿ ಮಾಡಿ ಎಂದು ಹೇಳಿದ್ದರೂ ಸಹಿ ಮಾಡಿಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾವು ಹಾಜರುಪಡಿಸಿರುವಂತಹ ಎಮ್ ಒ ಯು ಪತ್ರದಲ್ಲಿ ತಿಳಿಸಿರುವಂತೆ ಒಂದು ವೇಳೆ ನಿವೇಶನ ನೋಂದಣಿ ಮಾಡಿಸಿಕೊಡುವುದು ವಿಳಂಬವಾದಲ್ಲಿ ಮುಂಗಡವಾಗಿ ಪಾವತಿ ಮಾಡಿದ ಹಣವನ್ನು ಒಂದನೇ ಪಾರ್ಟಿದಾರರು ಮರುಪಾವತಿ ಮಾಡಬೇಕಾಗುತ್ತದೆ ಎನ್ನುವ ಷರತ್ತನ್ನು ತಿಳಿಸಲಾಗಿರುತ್ತದೆ ಎಂದರೆ ಸರಿ.

ನಿಪಿ:8 ರಂತಿರುವ ಕ್ರಯದ ಕರಾರುಪತ್ರದ ಆದಾರದ ಮೇಲೆ ಕ್ರಯಪತ್ರ ಮಾಡಿ ನೋಂದಣಿ ಮಾಡಿಕೊಡುವಂತೆ ಕೇಳಿ ನಾವು ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ಕ್ರಯದ ಕರಾರುಪತ್ರದ ರದ್ದಾಯಿತಿ ಕುರಿತಂತೆ ರದ್ದಾಯಿತಿ ಪತ್ರವನ್ನು ನಾನು ಮಾಡಿಸಿಕೊಂಡಿರುವುದಿಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಲಾದ ಚೆಕ್ಕನ್ನು ಆರೋಪಿಯು ನನಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

2. ನಮ್ಮ ವಕೀಲರ ಮೂಲಕ ಕಳುಹಿಸಿರುವ ನೋಟೀಸು ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹೇಳಲಾದ ವ್ಯವಹಾರಕ್ಕೆ ಸಂಬಂದಪಟ್ಟಂತೆ ಮತ್ತು ಚೆಕ್ಕಿಗೆ ಸಂಬಂದಪಟ್ಟಂತೆ ಇನ್ನೊಂದು ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿ. ಆ ಪ್ರಕರಣವನ್ನು ಆಲ್ಫಾ ಡೆವಲಪರ್ ಮತ್ತು ಆರೋಪಿಯ ವಿರುದ್ದ ದಾಖಲಿಸಲಾಗಿರುತ್ತದೆ ಎಂದರೆ ಸರಿ. ಕಂತುಗಳ ರೂಪದಲ್ಲಿ ಹಣ ಪಾವತಿ ಮಾಡಿರುವ ಕುರಿತಂತೆ ರಶೀದಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇವೆ. ಆ ರೀತಿ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಆರೋಪಿಯು ಯಾವುದೇ ಸೈಟ್ ನಮಗೆ ಮಾರಾಟ ಮಾಡುತ್ತೇವೆ ಎಂದು ಹೇಳಿ ಕರಾರುಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮಿಂದ ಯಾವುದೇ ಹಣವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿಯು ಮದ್ಯೆ ಯಾವುದೇ ವ್ಯವಹಾರ ನಡೆಯದಿದ್ದರೂ ಸಹ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ಮತ್ತು ನನ್ನ ಸಾಕ್ಷ್ಯದ ಪ್ರಮಾಣಪತ್ರದಲ್ಲ ಹೇಳಿಕೊಂಡಿರುವುದು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

15 ನೇ ಅಪರ ನ್ಯಾಯಾಧೀಶರು

ಮತ್ತು ಎಂಎಸಿಟಿ